ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-3 Issue 4, Jan-Feb 2022, Pp.61-66.**
**©*IIMRD*, Mysuru**

IIMRD JOURNALS

**www.iimrd.com**

# ಎಲ್.ಜಿ. ಹಾವನೂರು ವರದಿ: ಮೀಸಲಾತಿ ಮತ್ತು ವರ್ತಮಾನದ ಅನುಸಂಧಾನ

**ಪೂಜಾರಿ ಯಲ್ಲೇಶ**
ಸಂಶೋಧಕರು, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

## ಸಾರಾಂಶ (Abstract)

*ಭಾರತವು ಜ್ಯಾತ್ಯಾತೀತ ರಾಷ್ಟ್ರ. ಇಲ್ಲಿ ಹಲವು ಜಾತಿ ಧರ್ಮಕ್ಕೆ ಸೇರಿದ ಜನಾಂಗದವರು ವಾಸಿಸುತ್ತಿದ್ದಾರೆ. ಅದರಲ್ಲಿ ನಾಡಿನ ಬಹುಸಂಖ್ಯಾತರಾಗಿರುವ ತಳ ಸಮುದಾಯಗಳು ತಮ್ಮ ಸಾಂಸ್ಕೃತಿಕ ಚಹರೆಗಳನ್ನು ಕಳೆದುಕೊಂಡಿದ್ದಾರೆ. ಈ ಕಾರಣದಿಂದ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ರಾಜಕೀಯವಾಗಿ ಪ್ರಾತಿನಿಧ್ಯದಿಂದ ವಂಚಿತರಾಗಿದ್ದಾರೆ. ದೇಶದ ರಾಜಮನೆತನಗಳ ಪೈಕಿ, ಪ್ರಗತಿಪರ ಆಡಳಿತ ಪ್ರಜಾಪರ ನಿಲುವುಗಳಿಂದ ಪ್ರಖ್ಯಾತಿ ಪಡೆದಿದ್ದ ಮೈಸೂರು ಸಂಸ್ಥಾನದ ಅರಸರು ಪ್ರಜೆಗಳ ಹೋರಾಟಕ್ಕೆ ಸ್ಪಂದಿಸಿ ತಮ್ಮ ಆಡಳಿತದಲ್ಲಿ ಮೊದಲ ಬಾರಿಗೆ ಅಂದು ಮೀಸಲಾತಿಯನ್ನು ಜಾರಿಗೊಳಿಸಿದ್ದು ನಮಗೆ ತಿಳಿದಿದೆ. ಪ್ರಸ್ತುತ ಈ ಲೇಖನವು ಹಿಂದೆ 1972ರಲ್ಲಿ ದೇವರಾಜ ಅರಸು ಅವರ ಅವಧಿಯಲ್ಲಿ ಬಂದ ಎಲ್.ಜಿ. ಹಾವನೂರು ಆಯೋಗದ ವರದಿಯ ಅಂಶಗಳನ್ನು ನೋಡುವುದು ಮತ್ತು ಪ್ರಸ್ತುತ ಕರ್ನಾಟಕದಲ್ಲಿ ನಡೆಯುತ್ತಿರುವ ಮೀಸಲಾತಿ ಚರ್ಚೆಗಳು, ಅದರಲ್ಲಿಯೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಮೀಸಲಾತಿಯನ್ನು ಹೆಚ್ಚಿಸಬೇಕು ಎಂಬ ಬೇಡಿಕೆಗಳನ್ನು ಗಮನಿಸುತ್ತಾ, ಇದರ ಭಾಗವಾಗಿ ಬಂದ ಜಸ್ಟೀಸ್ ನಾಗಮೋಹನದಾಸ ಏಕಸದಸ್ಯ ಸಮೀತಿ ವರದಿಯನ್ನು ಅವಲೋಕಿಸಲಾಗಿದೆ. ಅಂದು ತಳಸಮುದಾಯಗಳಿಗೆ ಮೀಸಲಾತಿಯನ್ನು ಒದಗಿಸುವಲ್ಲಿ ಎಲ್. ಜಿ ಹಾವನೂರು ಅವರ ವರದಿಯ ಪಾತ್ರವನ್ನು ಮತ್ತು ಎಸ್‌ಸಿ, ಎಸ್‌ಟಿ ಮೀಸಲಾತಿಯನ್ನು ಹೆಚ್ಚಿಸಬೇಕು ಎಂಬ ವರದಿ ಸರ್ಕಾರಕ್ಕೆ ಸಲ್ಲಿಸಿರುವ ಜಸ್ಟೀಸ್ ನಾಗಮೋಹನ್ ದಾಸ್ ಅವರ ಶಿಫಾರಸ್ಸುಗಳನ್ನು ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ.*

**ಮುಖ್ಯಪದಗಳು(Keywords):** *ಎಲ್.ಜಿ ಹಾವನೂರು ವರದಿ, ಮೀಸಲಾತಿ, ನ್ಯಾ.ನಾಗಮೋಹನದಾಸ ವರದಿ ಶಿಫಾರಸ್ಸುಗಳು.*

## ಪೀಠಿಕೆ

ಭಾರತದಲ್ಲಿ ಮೀಸಲಾತಿ ಜಾರಿಯಾಗಿ ಇಂದಿಗೆ ನೂರು ವರ್ಷಕ್ಕೂ ಅಧಿಕವಾಗಿದೆ. ಮೀಸಲಾತಿ ಪರ ಮತ್ತು ವಿರೋಧ ಚರ್ಚೆಗಳು ಬಿರುಸಿನಿಂದ ಸಾಗುತ್ತಿದೆ. 1902 ಜುಲೈ 26ರಂದು ಭಾರತದಲ್ಲಿ ಮೊಟ್ಟ ಮೊದಲು ಬಾರಿಗೆ ಮೀಸಲಾತಿ ಜಾರಿಯಾಯಿತು. ಶಾಹು ಮಹಾರಾಜರು ಮೊದಲು ಮೀಸಲಾತಿಯನ್ನು

*Please cite this article as: ಪೂಜಾರಿ ಯಲ್ಲೇಶ. (2022). ಎಲ್.ಜಿ. ಹಾವನೂರು ವರದಿ: ಮೀಸಲಾತಿ ಮತ್ತು ವರ್ತಮಾನದ ಅನುಸಂಧಾನ. ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(4). ಪು.ಸಂ.61–66.*

ಜಾರಿಗೆ ತಂದರು. ನಂತರದ ಕಾಲಘಟ್ಟದಲ್ಲಿ ಮೈಸೂರು ಮಹಾರಾಜರು ಮೀಸಲಾತಿಯನ್ನು ಜಾರಿಗೊಳಿಸಿದರು. ಹಿಂದೆ 1873ರಲ್ಲಿ ಪುಲೆಯವರು ಸತ್ಯಶೋಧಕ ಸಮಾಜವನ್ನು ಪೂನಾದಲ್ಲಿ ಆರಂಭಿಸುವುದರೊಂದಿಗೆ ಮೀಸಲಾತಿ ಚಟುವಟಿಕೆ ಆರಂಭವಾಗುತ್ತದೆ. ನಂತರ ಮೀಸಲಾತಿಯನ್ನು ಸಂವಿಧಾನಿಕವಾಗಿ ಜಾರಿಗೊಳಿಸುವಲ್ಲಿ ಅಂಬೇಡ್ಕರ್ ಅವರು ವಹಿಸಿದ ಶ್ರಮ ಮತ್ತು ಹೋರಾಟಗಳು, ದುಂಡು ಮೇಜಿನ ಚರ್ಚೆಗಳು, ಬ್ರಿಟಿಷರಿಂದ ಅಂದು ದೊರೆತ ಮೀಸಲು ವ್ಯವಸ್ಥೆ ಮತ್ತು ಅಂದಿನ ಗಾಂಧಿ ಅವರೊಂದಿಗಿನ ಪೂನಾ ಒಪ್ಪಂದದ ಸನ್ನಿವೇಶಗಳು ನಮಗೆ ತಿಳಿದೆಯಿದೆ. ಅಂಬೇಡ್ಕರ್ ಅವರ ಮೀಸಲಾತಿ ಜಾರಿಯ ಹೋರಾಟ ಪರಿಶಿಷ್ಟ ಸಮುದಾಯದವರಿಗೆ ಸೀಮಿತವಾಗದೆ ಹಿಂದುಳಿದ ವರ್ಗದವರಿಗೂ ಮೀಸಲಾತಿಯ ಸವಲತ್ತನ್ನು ಒದಗಿಸಲು ತಮ್ಮ ಶಾಸನೀಯ ಸ್ಥಾನಕ್ಕೂ ರಾಜೀನಾಮೆ ನೀಡಲು ಸನ್ನಿವೇಶವನ್ನು ಎಲ್ಲಾರು ನೆನಪಿಡಬೇಕು. ಅಂದಿನ ಭಾರತ ಸರ್ಕಾರ ಕಾಕಾ ಕಾಲೇಲ್ಕರ್ ಎನ್ನುವವರ ನೇತೃತ್ವದಲ್ಲಿ ಸಮೀತಿಯೊಂದನ್ನು ರಚಿಸಲಾಯಿತು. ಈ ಸಮೀತಿ ವರದಿಗೂ ಮೊದಲೇ ನಾಲ್ವಡಿ ಮಹಾರಾಜರು ನೇತೃತ್ವದಲ್ಲಿ ಜಾರಿಯಾಗಿದ್ದ ಲೆಸ್ಲಿ ಮಿಲ್ಲರ್ ಸಮೀತಿಯು 1921ಕ್ಕೆ ತನ್ನ ವರದಿಯನ್ನು ಸಲ್ಲಿಸಿತು. ಈ ವರದಿಯ ಅನುಗುಣವಾಗಿ ಹಿಂದುಳಿದ ವರ್ಗಗಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಒಳಗೊಂಡಂತೆ ಶೇ 75%ರಷ್ಟು ಮೀಸಲಾತಿಯನ್ನು ನೀಡಲಾಯಿತು. ಕಾಕಾ ಕಾಲೇಲ್ಕರ್ ವರದಿ ಭಾರತದ ಮೊಟ್ಟ ಮೊದಲ ವರದಿಯಾಗಿದೆ.

ರಾಜ್ಯ ಸರ್ಕಾರವು 1960ರಲ್ಲಿ ಡಾ. ಆರ್. ನಾಗನಗೌಡ ಸಮಿತಿಯನ್ನು ರಚಿಸಿತು. ಇವರು ಹೊಸಪೇಟೆಯ ಇಂದಿನ ವಿಜಯನಗರ ಜಿಲ್ಲೆಯ ಭಾಗದವರಾಗಿದ್ದು, ಈ ಸಮಿತಿಯು 1961ರಲ್ಲಿ ತನ್ನ ವರದಿ ಸಲ್ಲಿಸಿತು. ಈ ವರದಿಯಲ್ಲಿ ಮುಸ್ಲಿಂರನ್ನು ಮತ್ತು ಒಕ್ಕಲಿಗರನ್ನು ಹಿಂದುಳಿದ ವರ್ಗಗಳ ಗುಂಪಿಗೆ ಸೇರಿಸಲಾಗಿದ್ದು, ಸುಮಾರು ಕರ್ನಾಟಕದಲ್ಲಿ 214 ಹಿಂದುಳಿದ ಜಾತಿಗಳನ್ನು ಗುರುತಿಸಿ, ಎರಡು ಗುಂಪಗಳಾಗಿ ವಿಂಗಡಿಸಿತು. ಅದರಲ್ಲಿ 19 ಜಾತಿಗಳನ್ನು ಹಿಂದುಳಿದ ಜಾತಿಗಳೆಂದು ಮತ್ತು 135 ಜಾತಿಗಳನ್ನು ತೀರ ಹಿಂದುಳಿದ ಜಾತಿಗಳೆಂದು ವಿಂಗಡಿಸಿತು. ಇದರಲ್ಲಿ ಲಿಂಗಾಯತ ಸಮುದಾಯವನ್ನು ಮುಂದುವರೆದ ಜನಾಂಗವೆಂದು ಸ್ಪಷ್ಟಪಡಿಸಿದ ಆಯೋಗವು ಒಕ್ಕಲಿಗರಿಂದ ಹಿಡಿದು ಇನ್ನುಳಿದ ಎಲ್ಲ ಜನಾಂಗವನ್ನು ಹಿಂದುಳಿದ ಜಾತಿಗಳ ಗುಂಪಿಗೆ ಸೇರಿಸಿತು.

ಈ ಸಮೀತಿಯ ಸಲಹೆಗಳನ್ನು ಸರ್ವೋಚ್ಚ ನ್ಯಾಯಲಯವು ಅಸಿಂಧುಗೊಳಿಸಿ, ಜಾತಿಯ ಮೇಲೆ ಹಿಂದುಳಿದ ಜಾತಿಗಳನ್ನು ಗುರುತಿಸುವುದು ಸರಿಯಲ್ಲ, ಬದಲಾಗಿ ಜಾತಿ ಅಂಶದ ಜೊತೆಗೆ ಅವರ ವೃತ್ತಿ, ಪರಂಪರೆ ಮತ್ತು ಆರ್ಥಿಕ ಅಂಶಗಳನ್ನು ಆಧಾರವಾಗಿಟ್ಟುಕೊಳ್ಳಬೇಕೆಂದು ತಿಳಿಸಿತು. ಈ ಆದೇಶದಂತೆ ಹಿಂದುಳಿದ ಜಾತಿಗಳಿಗೆ ಶೇ.30% ರಷ್ಟು ಮೀಸಲಾತಿಯನ್ನು ನಿಗದಿಪಡಿಸಿತು. ಇದರಿಂದ ಮೀಸಲಾತಿಯ ಪ್ರಮಾಣ ಶೇ.68% ರಿಂದ 48ಕ್ಕೆ ಇಳಿಯಿತು. ಮುಂದೆ 1964ರ ಸುಪ್ರೀಂ ಕೋರ್ಟ ಆದೇಶದ ಹಿನ್ನಲೆಯಲ್ಲಿ ದೇವರಾಜ ಅರಸು ಸರ್ಕಾರವು 1972ರಲ್ಲಿ ಮೊದಲ ಹಿಂದುಳಿದ ವರ್ಗಗಳ ಆಯೋಗವನ್ನು ರಚಿಸಿತು ಮತ್ತು ಈ ಆಯೋಗವು ಕರ್ನಾಟಕದಲ್ಲಿ ಬಹಳ ವ್ಯವಸ್ಥಿತವಾಗಿ ಜಾರಿಯಾದ ಆಯೋಗ ಇದಾಗಿತ್ತು.

**ಎಲ್.ಜೆ. ಹಾವನೂರ್ ಆಯೋಗ: (1972)**

ಕರ್ನಾಟಕದ ಅಂದಿನ ಮುಖ್ಯಮಂತ್ರಿಗಳಾದ ಡಿ.ದೇವರಾಜ ಅರಸು ಅವರ ಕಾಲದಲ್ಲಿ ಹಿಂದುಳಿದ ಜಾತಿಗಳ ಮೀಸಲಾತಿಯನ್ನು ಪುನರ್ ವಿಮರ್ಶಿಸಲು ಎಲ್.ಜಿ ಹಾವನೂರು ನೇತೃತ್ವದಲ್ಲಿ 1972ರಲ್ಲಿ ಸಮಿತಿಯನ್ನು ರೂಪಿಸಲಾಯಿತು. ಎಲ್.ಜಿ. ಹಾವನೂರು ಅವರು ತಳ ಸಮುದಾಯಗಳ ಅಭಿವೃದ್ದಿಗೆ ಶ್ರಮಿಸಿದವರು. ಸಮಾನತೆ ಎಂದರೆ ಸಮಾನ ಜಾತಿಗಳನ್ನು ಸಮಾನವಾಗಿ ನೋಡುವುದು, ಅಸಮಾನತೆಯಿಂದ ಕೂಡಿರುವ ಸಾಮಾಜಿಕ ವ್ಯವಸ್ಥೆಯಲ್ಲಿ ಸಮಾನತೆಯನ್ನು ಹೇಗೆ ಸಾಧಿಸಿಕೊಳ್ಳಬೇಕು ಎಂಬ ತತ್ವವನ್ನು ವರದಿಯಲ್ಲಿ ತಿಳಿಸಿದ್ದಾರೆ.

ಹಾವನೂರು ಆಯೋಗವು ತನ್ನ ವರಿದಿಯ ಮುಖ್ಯಂಶಗಳಲ್ಲಿ ಶೈಕ್ಷಣಿಕವಾಗಿ ಹಿಂದುಳಿದ ಜಾತಿ ಮತ್ತು ಬುಡಕಟ್ಟುಗಳನ್ನು ವೀಕ್ಷಿಸಿದ್ದು, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳು ಶೈಕ್ಷಣಿಕವಾಗಿ ಹಿಂದುಳಿದಿವೆ ಎಂದು ಆಯೋಗ ನಿರ್ಧರಿಸಿದ್ದು, ಸಾಮಾಜಿಕವಾಗಿ ಹಿಂದುಳಿದಿರುವಿಕೆಯು ಕಂಡು ಬಂದಿದೆ. ಗ್ರಾಮೀಣ ಪ್ರದೇಶಗಳಲ್ಲಿ ಪ್ರತ್ಯೇಕ ವಾಸ, ಭೂಮಿ ಮನೆಯಂತಹ ಯಾವುದೇ ಸ್ಥಿರಾಸ್ತಿ ಹೊಂದಿಲ್ಲದವರೆ ಎಂಬ ಅಂಶವನ್ನು ವರದಿಯಲ್ಲಿ ಉಲ್ಲೇಖಿಸಿದ್ದಾರೆ. ಜೊತೆಗೆ ಆಯೋಗವು ಔದ್ಯೋಗಿಕವಾಗಿಯು ಪ್ರತಿ ಜಾತಿಯ ಸರ್ಕಾರಿ ಸೇವೆಯಲ್ಲಿ ಹೊಂದಿರುವ ಪ್ರಾತಿನಿಧ್ಯ ಮತ್ತು ಆ ಜನಾಂಗದ ಒಟ್ಟು ಪ್ರಮಾಣ ಸರಾಸರಿಯನ್ನು ವಿಕ್ಷೀಸಿದಾಗ 89 ಜಾತಿಗಳಲ್ಲಿ 29 ಜಾತಿಗಳು ಸಾಕಷ್ಟು ಪ್ರಾತಿನಿಧ್ಯ ಹೊಂದಿರುವುದು ಆಯೋಗ ತನ್ನ ವರದಿಯಲ್ಲಿ ತಿಳಿಸಿದೆ.

ಆಯೋಗವು ವರ್ಗಿಕರಣ ಮತ್ತು ಶಿಫಾರಸುಗಳಲ್ಲಿ 3 ಗುಂಪುಗಳಾಗಿ ವಿಂಗಡಿಸಿದೆ. ಇದರಲ್ಲಿ ಎಲ್ಲಾ ಹಿಂದುಳಿದ ಜಾತಿಗಳನ್ನು ಸೇರಿಸಲಾಯಿತು.

- ಹಿಂದುಳಿದ ಸಮುದಾಯಗಳ
- ಹಿಂದುಳಿದ ಜಾತಿಗಳು
- ಹಿಂದುಳಿದ ಪಂಗಡಗಳು.

ಆಯೋಗವು ತನ್ನ ಸಮೀಕ್ಷೆಯಲ್ಲಿ ಕಂಡುಕೊಂಡಂತೆ ರಾಜ್ಯದಲ್ಲಿ ಶೇ.75ರಷ್ಟು ಭಾಗ ಜನ ಶೈಕ್ಷಣಿಕವಾಗಿ ಮತ್ತು ಸರ್ಕಾರಿ ನೌಕರಿಯಲ್ಲಿ ವಂಚಿತರಾಗಿದ್ದಾರೆ. ಅಭಿವೃದ್ಧಿ ದೃಷ್ಟಿಯಿಂದ 75% ರಷ್ಟು ಮೀಸಲಾತಿ ಅತ್ಯಗತ್ಯ ಎಂದು ಆಯೋಗ ಹೇಳಿದೆ. ಆದರೂ ತನ್ನ ಶಿಫಾರಸ್ಸಿನಲ್ಲಿ ಶೇ.50% ರಷ್ಟು ಮೀಸಲಾತಿಯನ್ನು ನಿಗದಿಪಡಿಸಿತು. ಕಾರಣ ನ್ಯಾಯಾಲಯ ಶೇ.50%ರಷ್ಟು ಮೀಸಲಾತಿ ಮೀರಬಾರದೆಂಬ ತೀರ್ಪನ್ನು ಗಮನದಲ್ಲಿಟ್ಟುಕೊಂಡು ಮೀಸಲಾತಿಯನ್ನು ನಿಗದಿಗೊಳಿಸಿದರು. ಜೊತೆಗೆ ಮೀಸಲಾತಿ ವರ್ಗೀಕರಣ ವಿಷಯದಲ್ಲಿ ಆಯೋಗವು ಹಿಂದುಳಿದ ಸಮುದಾಯಗಳಿಗೆ ಶೇ.16% ರಷ್ಟು, ಹಿಂದುಳಿದ ಜಾತಿಗಳಿಗೆ ಶೇ.10% ರಷ್ಟು, ಹಿಂದುಳಿದ ಬುಡಕಟ್ಟುಗಳಿಗೆ ಶೇ.6% ರಷ್ಟು, ಪರಿಶಿಷ್ಟ ಜಾತಿಗಳಿಗೆ ಶೇ.15% ರಷ್ಟು ಮತ್ತು ಪರಿಶಿಷ್ಟ ಪಂಗಡಗಳಿಗೆ ಶೇ.03% ರಷ್ಟು ಒಟ್ಟು 50% ರಷ್ಟು ಮೀಸಲಾತಿಯನ್ನು ಹಾವನೂರು ಆಯೋಗವು ಹಿಂದುಳಿದ ಜನರ ಕಲ್ಯಾಣಕ್ಕಾಗಿ ಈ ರೀತಿ ಪ್ರಾತಿನಿಧ್ಯವನ್ನು ವರ್ಗೀಕರಿಸಿದೆ. ಈ ಮೀಸಲಾತಿಯು ನೇಮಕಾತಿ ಮತ್ತು ಬಡ್ತಿಗೂ ಅನ್ವಯಿಸಬೇಕು. 1975ರಲ್ಲಿ ಆಯೋಗ ಸರ್ಕಾರಕ್ಕೆ ವರದಿ

ಸಲ್ಲಿಸಿತು. ಇದನ್ನು ಅಂಗೀಕರಿಸಿದ್ದು 1977ರಲ್ಲಿ, ಈ ವರದಿಯಲ್ಲಿ ಹಲವು ಮಾರ್ಪಾಡುಗಳನ್ನು ಮಾಡಲಾಯಿತು. ಮಾರ್ಪಾಡದ ವರದಿಯಲ್ಲಿ ಮುಸ್ಲಿಂರನ್ನು ಹಿಂದುಳಿದ ಪಂಗಡಗಳ ವ್ಯಾಪ್ತಿಗೆ ನಿಗದಿಗೊಳಿಸಿ ಆದೇಶ ಹೊರಡಿಸಿತು. ಸರ್ಕಾರದಿಂದ ಪರಿಷ್ಕರಣೆಗೊಂಡ ಮೀಸಲಾತಿ ಮುಕ್ತ ಸ್ಪರ್ಧೆಯಲ್ಲಿ (ಜಿಎಂ) ಶೇ.46% ರಷ್ಟು, ಹಿಂದುಳಿದ ಸಮುದಾಯಗಳಿಗೆ ಶೇ.20% ರಷ್ಟು, ಹಿಂದುಳಿದ ಜಾತಿಗಳಿಗೆ ಶೇ.10% ರಷ್ಟು, ಹಿಂದುಳಿದ ಬುಡಕಟ್ಟುಗಳಿಗೆ ಶೇ.5% ರಷ್ಟು, ವಿಶೇಷ ಗುಂಪಗಳಿಗೆ ಶೇ.5% ರಷ್ಟು, ಪರಿಶಿಷ್ಟ ಜಾತಿಗಳಿಗೆ ಶೇ.15% ರಷ್ಟು ಮತ್ತು ಪರಿಶಿಷ್ಟ ವರ್ಗಗಳಿಗೆ ಶೇ.3% ರಷ್ಟು ಮೀಸಲಾತಿಯನ್ನು ಸರ್ಕಾರ ಘೋಷಿಸಿತು.

ಹೀಗೆ ಎಲ್.ಜೆ ಹಾವನೂರು ಅವರ ವರದಿಯಂತೆ ಲಿಂಗಾಯತ ಮತ್ತು ಒಕ್ಕಲಿಗ ಸಮುದಾಯಗಳನ್ನು ಹೊರತುಪಡಿಸಿ ಹಿಂದುಳಿದ ಜಾತಿಗಳಿಗೆ ಮೀಸಲಾತಿ ಜಾರಿಯಾಯಿತು. ಇದರಿಂದ ಲಿಂಗಾಯತ ಮತ್ತು ಒಕ್ಕಲಿಗರಿಂದ ತೀವ್ರ ಪ್ರತಿಭಟನೆಗಳಾದವು ಮತ್ತು ಸರ್ಕಾರದ ಶೇ.58% ರಷ್ಟು ಮೀಸಲಾತಿಯನ್ನು ನ್ಯಾಯಲಯದಲ್ಲಿ ಪ್ರಶ್ನಿಸಲಾಯಿತು. ಹಾಗೇಯೇ ಇನ್ನೊಂದಡೆ ಆರ್.ಗುಂಡರಾವ್ ಅವರು ಮುಖ್ಯಮಂತ್ರಿಯಾದ ಮೇಲೆ ಮತ್ತೊಂದು ಹಿಂದುಳಿದ ಜಾತಿಗಳ ಆಯೋಗಕ್ಕೆ ಶಿಫಾರಸ್ಸು ಮಾಡಿದರು. ಅದ್ದರಿಂದ ಹಾವನೂರು ಆಯೋಗದ ಶಿಫಾರಸ್ಸಿನ ಮೀಸಲಾತಿ ಹೆಚ್ಚು ಕಾಲ ಜಾರಿಯಲ್ಲಿ ಉಳಿಯಲು ಸಾಧ್ಯವಾಗಲಿಲ್ಲ. ನಂತರ ಕರ್ನಾಟಕದಲ್ಲಿ ಟಿ.ವೆಂಕಟಸ್ವಾಮಿ ಆಯೋಗ (1983), ಓ.ಚೆನ್ನಪ್ಪರೆಡ್ಡಿ ಆಯೋಗ (1988), ಪ್ರೋ.ರವಿವರ್ಮ ಕುಮಾರ್ ಆಯೋಗ (2002), 1994ರಲ್ಲಿ ಶಾಶ್ವತ ಹಿಂದುಳಿದ ವರ್ಗಗಳ ಆಯೋಗ ಜಾರಿಗೆ ಬಂದಿದೆ. ಈ ಎಲ್ಲಾ ಆಯೋಗಳು ತಳಸಮುದಾಯಗಳ ಮೀಸಲಾತಿಗೆ ಬಂದರು, ಇದರಲ್ಲಿ ತಳಸಮುದಾಯಗಳ ಉಳಿವಿಗೆ ಹಾವನೂರು ಆಯೋಗದ ವರದಿಯ ಶಿಫಾರಸ್ಸುಗಳು ಹೆಚ್ಚು ಪ್ರಮುಖವು ಮತ್ತು ವೈಜ್ಞಾನಿಕವಾಗಿದೆ ಎಂಬುದು ಹಲವಾರ ಅಭಿಪ್ರಾಯ.

ಪ್ರಸ್ತುತ ದಿನಮಾನಗಳಲ್ಲಿ ಮೀಸಲಾತಿ ಬೇಕು ಎನ್ನುವ ಗುಂಪು ಒಂದಡೆಯಾದರೆ, ಇನ್ನೊಂದಡೆ ಮೀಸಲಾತಿ ಬೇಡ ಎನ್ನುವ ಗುಂಪು, ಈ ನಡುವೆ ಮೀಸಲಾತಿ ಒಂದು ಸಾಮಾನ್ಯ ಕಾರ್ಯಕ್ರಮವಾಗಿ ಉಳಿದಿದೆ. ಅದರೆ ಮೀಸಲಾತಿಯು ಒಂದು ಸಾಮಾಜಿಕ ಅಸಮಾನತೆಯನ್ನು ಸರಿಪಡಿಸಲು ಇರುವ ಉದ್ದೇಶಿತ ಯೋಜನೆಯಾಗಿದ್ದು, ನಿತ್ಯ ಕರ್ನಾಟಕದಲ್ಲಿ ನಡೆಯುತ್ತಿರುವ ಮೀಸಲಾತಿ ಹೆಚ್ಚಿಸಬೇಕು ಎಂಬ ಹೋರಾಟ ಮತ್ತು ಇನ್ನೂ ಕೆಲ ಸಮುದಾಯಗಳು ನಮ್ಮನ್ನು ಬೇರೆ ಸಮುದಾಯಕ್ಕೆ ಸೇರಿಸಿ ಎಂಬ ಬೇಡಿಕೆಗಳಿವೆ. ಇದರ ನಡುವೆ ಪರಿಶಿಷ್ಟ ಪಂಗಡದ ವಾಲ್ಮೀಕಿ ಸಮುದಾಯವು ಉದ್ಯೋಗ ಮತ್ತು ಶಿಕ್ಷಣದಲ್ಲಿ 7.5% ರಷ್ಟು ಮೀಸಲಾತಿಯನ್ನು ನೀಡಬೇಕು ಎಂಬ ಬೇಡಿಕೆಯನ್ನು ಸರ್ಕಾರದ ಮುಂದೆ ಇಟ್ಟಿದೆ ಮತ್ತು ಈ ಕುರಿತು ಹಲವು ಬಾರಿ ಮನವಿಗಳನ್ನು ಮತ್ತು ವಾಲ್ಮೀಕಿ ಗುರುಪೀಠದ ಸಹಯೋಗದೊಂದಿಗೆ ಇಡೀ ಸಮುದಾಯ ರಾಜನಳ್ಳಿಯಿಂದ ರಾಜಧಾನಿ ಬೆಂಗಳೂರು ವಿಧಾನಸೌದದವರೆಗೆ ಪಾದಯಾತ್ರೆಯನ್ನು ಮಾಡಿ ತಮ್ಮ ಬೇಡಿಕೆಯನ್ನು ಸರ್ಕಾರಕ್ಕೆ ತಿಳಿಸಿದೆ. ಇದರ ಭಾಗವಾಗಿ ಸರ್ಕಾರ ಜಸ್ಟೀಸ್ ನಾಗಮೋಹನದಾಸ ಅವರ ನೇತೃತ್ವದಲ್ಲಿ ಏಕಸದಸ್ಯ ಸಮೀತಿ ರಚಿಸಿದೆ.

**ನಾಗಮೋಹನ್ ದಾಸ್ ವರದಿ ಪ್ರಮುಖ ಅಂಶಗಳು**

ರಾಜ್ಯದಲ್ಲಿನ ಎಸ್‌ಸಿ, ಎಸ್‌ಟಿ ಸಮುದಾಯಗಳಿಗೆ ಮೀಸಲಾತಿ ಪ್ರಮಾಣ ಹೆಚ್ಚಿಸಲು ನೇಮಿಸಲಾದ ಸಮೀತಿಯು ತನ್ನ ವರದಿಗೂ ಮುನ್ನ ರಾಜ್ಯದ ಪರಿಶಿಷ್ಠರ ಮೀಸಲಾತಿ ಹೆಚ್ಚಿಸಬೇಕು ಎಂಬ ಬೇಡಿಕೆಗಳನ್ನು ಅಲಿಸಿದ್ದು, ಅದರಲ್ಲಿ ಕಲ್ಯಾಣ ಕರ್ನಾಟಕದ ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿಯ ಆರು ಜಿಲ್ಲೆಗಳು ಸುಮಾರು 1 ಸಾವಿರಕ್ಕೂ ಹೆಚ್ಚು ಜನರು ತಮ್ಮ ಮನವಿಗಳನ್ನು ಸಲ್ಲಿಸಿದ್ದಾರೆ. ಈ ಕುರಿತು ನ್ಯಾ.ನಾಗಮೋಹನ್ ದಾಸ್ ಅವರು ಮೀಸಲಾತಿ ವ್ಯವಸ್ಥೆಯ ವಿರುದ್ಧ ಹೆಚ್ಚುತ್ತಿರುವ ಧ್ವನಿಗಳ ಬಗ್ಗೆ ಗಂಭೀರ ಕಳವಳವನ್ನು ವ್ಯಕ್ತಪಡಿಸಿದ್ದಾರೆ. ಮೀಸಲಾತಿಯ ಅಗತ್ಯತೆ ಬಗ್ಗೆ ಬುದ್ದಿಜೀವಿಗಳು ಸಮುದಾಯಗಳಿಗೆ ಅರಿವು ಮೂಡಿಸವುದು ಅವಶ್ಯವು ಮತ್ತು ಅನಿವಾರ್ಯವು ಇದೆ. ಹಾಗೂ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಅಸಮಾನತೆಗಳನ್ನು ತೊಡೆದು ಹಾಕಲು ಮತ್ತು ತಳ ಸಮುದಾಯಗಳು ಸಾಮಾಜಿಕ ನ್ಯಾಯವನ್ನು ಸಾಧಿಸಲು ಮೀಸಲಾತಿಯ ಅಗತ್ಯವನ್ನು ಪ್ರತಿಪಾದಿಸಿದ್ದು, ಗಮನಿಸಬೇಕಾಗಿದೆ ಮತ್ತು ವರದಿಯಲ್ಲಿ ಹೊಸದಾಗಿ ಗುರುತಿಸಲ್ಪಟ್ಟ ಎಸ್‌ಟಿ ಸಮುದಾಯದ ತಳವಾರ, ಪರಿವಾರ ಮತ್ತು ಸಿದ್ಧಿ ಸಮುದಾಯಗಳನ್ನು ಗಣನೆಗೆ ತೆಗೆದುಕೊಂಡಿರುವುದು ಗಮನಿಸಬಹುದು. ನಂತರ ಸಮೀತಿಯು ದಿನಾಂಕ 2 ಜುಲೈ 2020 ರಂದು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ವರದಿಯಲ್ಲಿ ಪರಿಶಿಷ್ಟ ಜಾತಿಗೆ ಇರುವ ಶೇ.15% ಮೀಸಲಾತಿಯನ್ನು ಶೇ.17% ವರೆಗೆ ಮತ್ತು ಪರಿಶಿಷ್ಟ ಪಂಗಡದವರಿಗೆ ಶೇ.03% ರಿಂದ ಶೇ.7% ರಷ್ಟು ಮೀಸಲಾತಿಯನ್ನು ನೀಡಲು ಶಿಫಾರಸ್ಸು ನೀಡಿದೆ. ಹಾಗೇ ವರ್ಷವೂ ಕಳೆದಿದೆ, ಅದರೂ ಸರ್ಕಾರ ಜಾಣನಡೆ ತೋರಿ ಸಮೀತಿ ವರದಿಯ ಶಿಫಾರಸ್ಸುಗಳ ಮೇಲ್ವಿಚಾರಣೆಗೆ ಉಪಸಮೀತಿಯನ್ನು ರಚಿಸಲಾಗಿದೆ. ಕಳೆದ ನಾಲ್ಕು ದಶಕಗಳಿಂದ ಮೀಸಲಾತಿ ಹೋರಾಟ ನಡೆಯುತ್ತಿದೆ. ಅದರೂ ಪರಿಶಿಷ್ಟ ಸಮುದಾಯಗಳಿಗೆ ಜನಸಂಖ್ಯಾಧಾರಿತವಾಗಿ ಮೀಸಲಾತಿ ದೊರೆಯದಾಗಿದೆ ಎಂಬುದು ವಾಸ್ತವ ಸಂಗತಿ ಮತ್ತು ಅತೀ ಶೀಘ್ರವಾಗಿ ನ್ಯಾ, ನಾಗಮೋಹನ್ ದಾಸ್ ಶಿಫಾರಸ್ಸುಗಳು ಜಾರಿಯಾಗುತ್ತದೆ ಎಂಬ ಆಶಾಭಾವನೆ ನಮ್ಮೆಲ್ಲರದಾಗಿದೆ.

**ಉಪಸಂಹಾರ**

ಒಟ್ಟಾರೆ ಕರ್ನಾಟಕದಲ್ಲಿ ತಳ ಸಮುದಾಯಗಳಿಗೆ ಮೀಸಲಾತಿ ಒದಗಿಸುವಲ್ಲಿ ಹಾವನೂರು ವರದಿ ಶಿಫಾರಸ್ಸುಗಳು ವರ್ತಮಾನಕ್ಕೆ ಹೆಚ್ಚು ವೈಜ್ಞಾನಿಕವು ಮತ್ತು ಪೂರಕವಾಗಿದೆ. ಎಸ್‌ಸಿ, ಎಸ್‌ಟಿ ಸಮುದಾಯಗಳು ಮೀಸಲಾತಿ ಹೆಚ್ಚಿಸಬೇಕು ಎಂಬ ನಾಗಮೋಹನ್ ದಾಸ್ ವರದಿಯ ಶಿಫಾರಸ್ಸುಗಳನ್ನು ಅವಲೋಕಿಸಿದಾಗ, ಈ ಶಿಫಾರಸ್ಸುಗಳು ಸ್ವಾಗತರ್ಹವು ಮತ್ತು ಅತೀ ಶೀರ್ಘವಾಗಿ ಅನುಷ್ಠಾನವಾಗಬೇಕಿದೆ. ಈ ಭಾಗವಾಗಿ ಕರ್ನಾಟಕದ 224 ವಿಧಾನಸಭಾ ಕ್ಷೇತ್ರಗಳಲ್ಲಿ 51 ಪರಿಶಿಷ್ಟರ ಮೀಸಲು ಕ್ಷೇತ್ರಗಳಿದ್ದು, ಅದರಲ್ಲಿ 36 ಪರಿಶಿಷ್ಟ ಜಾತಿಗೆ ಸೇರಿದ ಮತ್ತು 15 ಪರಿಶಿಷ್ಟ ಪಂಗಡಕ್ಕೆ ಸೇರಿದ ಕ್ಷೇತ್ರಗಳಿವೆ. ಒಟ್ಟು 51 ರಾಜಕೀಯ ಮೀಸಲು ಪ್ರಾತಿನಿಧ್ಯ ಕ್ಷೇತ್ರಗಳು ಸರ್ಕಾರದ ಅಧಿಕಾರ ಚುಕ್ಕಾಣಿಯಿಡಿಯುವಲ್ಲಿ ಅತೀ ಪ್ರಮುಖ ಪಾತ್ರವನ್ನು ವಹಿಸುತ್ತಿವೆ. ಅದರೂ ಕರ್ನಾಟಕದಲ್ಲಿ ಇಲ್ಲಿಯವರೆಗೂ ಒಬ್ಬ ದಲಿತ ಮುಖ್ಯಮಂತ್ರಿ ಕಾಣದಿರುವುದು ಮತ್ತು ಮೀಸಲಾತಿ ಹೆಚ್ಚುಸುವಲ್ಲಿ ಮೀಸಲು ಕ್ಷೇತ್ರದ ಪ್ರತಿನಿಧಿಗಳು ಒಗ್ಗಟ್ಟಿನ ಪ್ರಯತ್ನವನ್ನು

ಮಾಡಬೇಕಿದೆ ಎಂಬುದು ಹಲವಾರ ಅಭಿಪ್ರಾಯವು ಹೌದು ಮತ್ತು ನಾವುಗಳು ಈ ವಿಷಯವಾಗಿ ಎಚ್ಚೆತ್ತುಕೊಳ್ಳಬೇಕಾದ ಅನಿವಾರ್ಯತೆಯಿದೆ.

**ಪರಾಮರ್ಶನ ಗ್ರಂಥಗಳು**


- ಕರ್ನಾಟಕ ವಿಧಾನ ಸಭೆ. (2020). ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ, ಪತ್ರಿಕಾ ತುಣುಕುಗಳು, ದಿ ಡೆಕ್ಕನ್ ಹೆರಲ್ಡ್ ಪತ್ರಿಕೆ.
- ಚಂದ್ರಶೇಖರ. ಟಿ.ಆರ್. (2020). ಭಾರತದಲ್ಲಿ ಮೀಸಲಾತಿ ಮತ್ತು ಮಿಲ್ಲರ್ ಸಮಿತಿ ವರದಿ ಒಂದು ಅಧ್ಯಯನ, ನವಕರ್ನಾಟಕ ಪ್ರಕಾಶನ, ಬೆಂಗಳೂರು.
- ಚಿನ್ನಸ್ವಾಮಿ ಸೋಸಲೆ (2012). ಅಂಬೇಡ್ಕರ್ ವಾದ ಮತ್ತು ದಲಿತರ, ಪ್ರಕಾಶನ ಸ್ವಪ್ನ ಬುಕ್ ಹೌಸ್, ಬೆಂಗಳೂರು.
- ನಾಗ ಸಿದ್ದಾರ್ಥ ಹೊಲೆಯರ್. ಹೊ.ಬ. (2017). ಮೀಸಲಾತಿ ಮತ್ತು ಬಡ್ತಿ ಮೀಸಲಾತಿ, ಬೌದ್ಧ ಸಾಹಿತ್ಯ ಪ್ರಕಾಶನ, ಮೈಸೂರು.
- ಬೇನಾಳ. ಎಚ್. ಎಸ್. (2014). ಹಿಂದುಳಿದ ವರ್ಗಗಳಿಗೆ ಡಾ. ಅಂಬೇಡ್ಕರರ ಕೊಡುಗೆ, ಸಹಾನ ಪ್ರಕಾಶನ, ಗುಲ್ಬರ್ಗಾ.
- ವಿರೇಶ ಬಡಿಗೇರ (2019). ಸಂ, ಎಲ್. ಜಿ. ಹಾವನೂರು ವರದಿ ಮತ್ತು ಪ್ರಸ್ತುತ ಕರ್ನಾಟಕ, ಪ್ರಕಾಶನ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- Justice H.N. Nagamohan Das Panel on SC, ST quota submits report to CM, City today, 03-07-2020
- Shruthi H M Sastry. (2020). Justice Nagamohan Das Commission Submits report on hike in reservation for SC, ST communities, Deccan Herald paper.
- Staff Reporter. Nagamohan Das commission receives 70 applications, The Hindu paper, 10 December 2019.
- Special correspondent, Nagmohan Das commission backs increasing ST reservation quta, The Hindu Paper, 02-07-2020.